ಸೃಜನಿ

SRUJANI: Indian Journal of Innovative Research and Development (SIJIRD)
Volume-2 Issue 4, September-October 2023, Pp. 163-170
Bi-Monthly, Peer-Reviewed, Open Access, Indexed Journal

I S S N: 2583-3510
SIRDF
JOURNALS
editor@srujani.in
www.srujani.in

# ವಚನಗಳಲ್ಲಿ ಲೋಕಾನುಭವ ಪರಿಕಲ್ಪನೆಯ ವಿಸ್ತೃತ ನೋಟ

**ರವಿ ಕುಮಾರ ಡಿ.**

ಸಂಶೋಧನಾ ವಿದ್ಯಾರ್ಥಿ, ಇತಿಹಾಸ ಅಧ್ಯಯನ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

***Abstract:***

*ವಚನ ವಾಙ್ಮಯ ನಮ್ಮ ಪರಂಪರೆಯ ಅಪೂರ್ವ ಆಧ್ಯಾತ್ಮಿಕ-ಸಾಂಸ್ಕೃತಿಕ ಸಂಪತ್ತು. ಅಂತರಂಗ ವಿಕಾಸದೊಂದಿಗೆ ಸಮುದಾಯದ ಕಲ್ಯಾಣವನ್ನು ರೂಪಿಸುವ ನಿಟ್ಟಿನಲ್ಲಿ ನಿರಂತರ ಶ್ರಮಿಸಿದ ಶರಣರ ಸಾಹಿತ್ಯ ಇದು. ವ್ಯಕ್ತಿತ್ವ ನಿರ್ಮಾಣ ಹಾಗೂ ಸಮಾಜಪರ ಚಿಂತನೆಗಳಿಗೆ ಸಮರ್ಥ ವಾಹಕವಾಗಿ ವಚನನಿಧಿ ಸಂವೇಧಿಸಿರುವುದು ಕನ್ನಡ ಸಾಹಿತ್ಯದ ಗರಿಮೆ. ಶರಣರ ಸತ್ವಯುತ ವಚನಗಳು ವ್ಯಕ್ತಿತ್ವದ ಪ್ರಾಮಾಣಿಕ ಪ್ರತಿಬಿಂಬಗಳಂತೆ, ದಿನನಿತ್ಯದ ಬದುಕಿನಲ್ಲಿ ಪಾರಮಾರ್ಥಿಕ ಶಕ್ತಿಯನ್ನು ತುಂಬಿದುವು; ಅಂತೆಯೇ, ವೈಚಾರಿಕ ನಿಲುವನ್ನು ಸದೃಢಗೊಳಿಸಿದುವು. ಜಳ್ಳನ್ನು ತೂರಿ, ಗಟ್ಟಿ ಕಾಳನ್ನು ತನ್ನದಾಗಿಸಿಕೊಳ್ಳುವ ಹೊಸ ದೃಷ್ಟಿಯನ್ನು ಅವು ನೀಡಿದವು. ಪೂರ್ಣತೆಯತ್ತ ಸಾಗುವ ಅಂತರಂಗದ ಅಭೀಪ್ಸೆಗೆ ಸಾಧನಮಾರ್ಗವಾದುವು. ಚೈತನ್ಯ ಜೀವನಾಡಿಗಳಾಗಿ ಸಾರ್ವಕಾಲಿಕ ಮೌಲ್ಯಗಳನ್ನು ಬಿತ್ತರಿಸಿದುವು. ಅನುಭವ ಸಾಹಿತ್ಯ ಚಿರಂತನ ಸತ್ಯವನ್ನು, ಸಮರಸಪ್ರಜ್ಞೆಯ ಬೆಳಕನ್ನು ತೋರುತ್ತಾ, ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿತು. ಸ್ವಸ್ಥ ಸಮಾಜ ರಚನೆ, ಸಮಷ್ಟಿ ಹಿತವನ್ನೊಳಗೊಂಡ ಈ ಬಗೆಯ ಸಮಾಜಮುಖಿ ಧರ್ಮ ವೀರಶೈವ ಕವಿಗಳಿಗೆ ಕಾವ್ಯಾಭಿವ್ಯಕ್ತಿಯ ಮೂಲದ್ರವಾದದ್ದು ಅಚ್ಚರಿಯ ಸಂಗತಿಯೇನಲ್ಲ. "ಕಾವ್ಯಮಂ ಕೇಳ್ದು ಜನ ಬದುಕಬೇಕೆ"ನ್ನುವ ಆಶಯದಿಂದ, ಮನುಕುಲದ ಒಳಿತನ್ನೆ ಶರಣ ಸಂಸ್ಕೃತಿ ಪ್ರತಿಪಾದಿಸಿತು.*

***Keywords:*** *ವಚನ ಸಾಹಿತ್ಯ, ಲೋಕಾನುಭವ, ಸಮಾನತೆ, ವೈಚಾರಿಕತೆ, ಆಧ್ಯಾತ್ಮಿಕತೆ.*

**ಪೀಠಿಕೆ**

'ವಚನ' ಎಂದರೆ ಸಂಸ್ಕೃತದಲ್ಲಿ ಗದ್ಯ ಎಂಬ ಅರ್ಥದಲ್ಲಿ ಬಳಕೆಯಾಗುತ್ತದೆ. ಗದ್ಯದಲ್ಲಿ ಪದ್ಯದಲ್ಲಿ ಅಥವಾ ಗದ್ಯಪದ್ಯ ಮಿಶ್ರಿತಗೊಂಡು ಸಾಹಿತ್ಯ ರಚನೆಯಾಗಿರುವುದನ್ನು ಸಂಸ್ಕೃತದಲ್ಲೂ, ಕನ್ನಡದಲ್ಲೂ ನಾವು ಕಾಣುತ್ತೇವೆ. ಕನ್ನಡ ಸಾಹಿತ್ಯ ಕೃತಿಗಳಲ್ಲಿ ಪದ್ಯಗಳ ನಂತರ ನಡುನಡುವೆ ಗದ್ಯಭಾಗ ಬಂದರೆ ಅದನ್ನು 'ವಚನ'ವೆಂದು ಹೆಸರಿಸಿದ್ದಾರೆ. ಛಂದಸ್ಸಿನ ಲಯಬದ್ಧತೆಗಳು ಇಲ್ಲದ, ಆದರೆ ಮಾತಿನಂತೆ ಓದಬಹುದಾದ ಗದ್ಯ ಭಾಗವನ್ನು 'ವಚನ' ಎಂಬ ಹೆಸರಿನ ಬಿಡಿಬಿಡಿಯಾದ ಸಾಹಿತ್ಯದ ತುಣುಕುಗಳಿಗೂ, ಈವರೆಗೆ ಹೇಳಿದ 'ವಚನ'ದ ಅರ್ಥಕ್ಕೂ ಹೊಂದಾಣಿಕೆ ಅಷ್ಟಾಗಿ ಕಾಣಿಸುವುದಿಲ್ಲ. ಮಾತು ಎಂಬ ಅರ್ಥದಲ್ಲಿ ಅಲ್ಲದಿದ್ದರೂ ವಿಶಿಷ್ಟ ಬಗೆಯ ಹಾಗೂ ಕಟ್ಟುಪಾಡು ಇಲ್ಲದ, ಇತ್ತ ಗದ್ಯವೂ ಎನಿಸದ, ಅತ್ತ ಪದ್ಯವೂ ಎನಿಸದ ಬಿಡಿ 'ವಚನ' ವೈಚಾರಿಕ ಅಭಿವ್ಯಕ್ತಿಯ ಮುಕ್ತಕ ಎಂದು ವಚನವನ್ನು ಅರ್ಥೈಸಬಹುದು. ಆದ್ದರಿಂದ 'ವಚನ' ಎಂದರೆ ಒಂದು ಬಗೆಯ ವಿಶಿಷ್ಟ ರಚನೆ. ಹಾಡಲು

***Please cite this article as:*** ರವಿ ಕುಮಾರ ಡಿ. (2023). ವಚನಗಳಲ್ಲಿ ಲೋಕಾನುಭವ ಪರಿಕಲ್ಪನೆಯ ವಿಸ್ತೃತ ನೋಟ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 2(4), 163–170.

ಬರುವಂತೆ ಇದ್ದರೂ ವಚನಗಳು ಗೀತೆಗಳಲ್ಲ. ಶಿವಾಲಯಗಳ ಪಾವಿತ್ರ್ಯವನ್ನು ಹಾಳುಮಾಡದೇ ಶಿವಾಲಯದಲ್ಲಿ ಸ್ಥಾವರವಾಗಿ ಕುಳಿತಿದ್ದ ಶಿವನನ್ನು ಶಿವಾಲಯದಿಂದ ಹೊರಗೆ ತಂದು ಚಿಕ್ಕ ಆಕಾರದಲ್ಲಿ ಲಿಂಗವನ್ನು ಮಾಡಿ ಜಗುಲಿಯ ಮೇಲಿಟ್ಟು, ತಮ್ಮ ತೋಳಿನಲ್ಲಿ, ನೆತ್ತಿಯ ಮೇಲೆ ನಡುವಿನಲ್ಲಿ ಧರಿಸಿ ಪೂಜೆಮಾಡುತ್ತಿದ್ದ ಶಿವಭಕ್ತರನ್ನು ಕಂಡ ಶಿವಶರಣರು ಅವರನ್ನು ಸಾವಧಾನವಾಗಿ 'ವೀರಶೈವ'ದೆಡೆಗೆ ಸಾಗುವಂತೆ ಮಾಡಿದರು. ಅಂತೆಯೇ ಅವರ ಬೋಧನಾರೂಪದ 'ಹೇಳಿಕೆ'ಗಳು ವಚನಗಳಾಗಿ ಶೋಭಿಸಿದವು. ವಚನಕಾರರೆಲ್ಲರೂ ಸಾಮಾನ್ಯವಾಗಿ ಧರ್ಮಬೋಧಕರೇ. ಅವರು ಕವಿಗಳಲ್ಲ, ಪುರಾಣ ಪಂಡಿತರಲ್ಲ. ಅವರ ಬೋಧನಾತ್ಮಕ ಹೇಳಿಕೆಗಳೆಂಬ ವಚನಗಳ ಸರಳ ಕನ್ನಡದಲ್ಲಿ ಮೂಡಿಬಂದುದರಿಂದ ಜನಸಾಮಾನ್ಯರು ತಟ್ಟನೆ ಅವುಗಳಿಗೆ ಮಾರು ಹೋದರು. ಬಹು ತೀವ್ರವಾಗಿ ಅವರು 'ವಚನ'ಗಳಿಗೆ ಸ್ಪಂದಿಸಿದರು. ಜನರ ಈ ತೀವ್ರ ಪ್ರತಿಕ್ರಿಯೆಯನ್ನು ಕಂಡು ಶಿವಶರಣರು ಉತ್ಸಾಹಿಗಳಾದರು, ಚೋದನಗೊಂಡರು. ವ್ಯಕ್ತಿಪ್ರಾಧಾನ್ಯದಿಂದ ರೋಸಿ ಹೋಗಿದ್ದ ಸಾಮಾನ್ಯ ಜನತೆ ಸಮಾಜ ಪ್ರಧಾನ ವ್ಯವಸ್ಥೆಯೊಂದು ರೂಪುಗೊಳ್ಳುವ ಹಂತದಲ್ಲಿ ಅದು ಹೇಗಿರಬೇಕು? ಸಮಾಜದಲ್ಲಿ ವ್ಯಕ್ತಿಗಳ ಸರಿಯಾದ ಪಾತ್ರ, ಸ್ಥಾನ ಯಾವುದು ಆತ್ಮೋದ್ಧಾರದೊಂದಿಗೆ ಹೇಗೆ ಸಾಧ್ಯ? ಈ ವಾಸ್ತವ ಬದುಕಿನಲ್ಲಿ ಇದ್ದುಕೊಂಡೇ, ಈ ಸಂಸಾರವನ್ನು ಕಟ್ಟಿಕೊಂಡೇ ಪಾರಮಾರ್ಥವನ್ನು ಹೇಗೆ ಸಾಧಿಸಬೇಕು? ಎಂಬ ಮಾರ್ಗವನ್ನು ಶಿವಶರಣರು ಹುಡುಕಿಕೊಂಡರು. ಅವರು ತಾವು ಹುಡುಕಿಕೊಂಡ ಸತ್ಯವನ್ನು ಬಿಚ್ಚಿ ಹೇಳಲು ಮುಚ್ಚುಮರೆ ಇಲ್ಲದೆ 'ವಚನ' ರೂಪವನ್ನು ಬಳಕೆಗೆ ತಂದರು. ಹೀಗೆ ಒಂದು ವಿಶಿಷ್ಟ ಸಂದರ್ಭದಲ್ಲಿ 'ವಚನ' ರೂಪುತಳೆಯಿತು. ಶಿವಶರಣರು ಮೊದಮೊದಲು ತಾವು ತಮಗೆ ತಿಳಿದಂತೆ ಹೇಳುತ್ತಾ ಹೋದರು. ಅವರ ಮಾತುಗಳೇ ವಚನಗಳಾದವು. ಮಾತಿನ ಶೈಲಿಯನ್ನೂ ವಚನಗಳಲ್ಲಿ ನಾವು ಕಾಣಬಹುದು. ಹೇಳುವುದನ್ನು ಸಂಕ್ಷಿಪ್ತವಾಗಿ ಹೇಳಬೇಕು ಸುಂದರವಾಗಿ ಹೇಳಬೇಕು ಎಂಬ ಇಚ್ಛೆ ಶಿವಶರಣರದು. ಅದು ಜನರ ಮೇಲೆ ಪರಿಣಾಮ ಬೀರುವುದು ಎಂಬುದನ್ನು ಅರಿತ ಅವರು ಅದನ್ನು ಚಾಚೂ ತಪ್ಪದೆ ಅನುಸರಿಸಿದರು. ಅವರ ಮಾತೇ 'ಜ್ಯೋತಿ'ಯಾಯಿತು. 'ಮುತ್ತಿನಹಾರ'ವಾಯಿತು. ಚನ್ನಬಸವಣ್ಣನು 'ವಚನ' ಎಂದರೆ 'ಗೀತ ಮಾತು' ಎಂದು ಕರೆದಿದ್ದಾನೆ. ಶಿವಶರಣರ ಆ ಗೀತ ಮಾತು ಜ್ಯೋತಿ ಹೇಗಾಯಿತು ಎಂಬುದನ್ನು ಬಹಳ ಸುಂದರವಾಗಿ ವಿವರಿಸುತ್ತಾನೆ. ಶಬ್ದದಿಂದ ನಿಶ್ಶಬ್ದದ ಕಡೆಗೆ ಅಂದರೆ ವಚನದಿಂದ ನಿರ್ವಚನದ ಕಡೆಗೆ, ಮಾತಿನಿಂದ ಮೌನದ ಕಡೆಗೆ, ಜೀವನದಿಂದ ಜೀವನ್ಮುಕ್ತಿಯ ಕಡೆಗೆ ಹೋಗಲು 'ಗೀತ ಮಾತು' ಅಂದರೆ ವಚನ ಆಧಾರವಾಯಿತು.

ಶರಣರು ಅಕ್ಷರ ತಿಳಿಯದವರಿಗೂ ಆಧ್ಯಾತ್ಮ ಮಾರ್ಗವನ್ನು ವಚನವೆಂಬ ವಿಶಿಷ್ಟ ರಚನೆಗಳ ಮೂಲಕ ಹೇಳಿದರು. ಅವನ್ನು ಹಾಡಿದರೂ ಹಾಡಬಹುದು, ಓದಿದರೂ ಓದಬಹುದು, ಕೇಳಿದರೂ ಕೇಳಬಹುದು. ಅಂತೆಯೇ ಸಿದ್ಧರಾಮ ಶಿವಯೋಗಿ ವಚನವನ್ನು 'ಹಾಡುವ ನುಡಿಗಡಣ' ಎನ್ನುತ್ತಾನೆ. ಅಷ್ಟೇ ಅಲ್ಲ "ಎಮ್ಮ ವಚನದೊಂದು ಪಾರಾಯಣಕ್ಕೆ ವ್ಯಾಸನದೊಂದು ಪುರಾಣ ಸಮಬಾರದಯ್ಯ, ಎಮ್ಮ ವಚನದ ನೂರೆಂಟಧ್ಯಯನಕ್ಕೆ ಶತರುದ್ರಿಯಾಗ ಸಮಬಾರದಯ್ಯ, ಎಮ್ಮ ವಚನದ ಸಾಸಿರ ಪಾರಾಯಣಕ್ಕೆ ಗಾಯತ್ರೀ ಲಕ್ಷ ಜಪ ಸಮಬಾರದಯ್ಯ ಕಪಿಲಸಿದ್ಧ ಮಲ್ಲಿಕಾರ್ಜುನಾ' ಎಂದು ಶರಣರು ವಚನಗಳ ಮಹತ್ವವನ್ನು ಸಾರಿದ್ದಾನೆ. 'ವಚನ'ಗಳ ಮಹತ್ವವನ್ನು ಅರಿತ ಪ್ರತಿಯೊಬ್ಬ ಶರಣನೂ ಯಾವ ಸಂಕೋಚವಿಲ್ಲದೆ ಧೈರ್ಯದಿಂದ ವಚನಗಳನ್ನು ರಚಿಸಲು ತೊಡಗಿದ. ಯಾವುದೇ ಕಾಯಕ (ವೃತ್ತಿ) ಮಾಡುತ್ತ ಇರಲಿ, ಎಂತಹ ಸಣ್ಣ ವ್ಯಕ್ತಿಯೇ ಆಗಿರಲಿ ವಚನ ರಚನೆಗೆ ತೊಡಗಿದ. ಇದರಿಂದ ವಚನ ಸಾಹಿತ್ಯ ವೈವಿಧ್ಯಮಯವಾಯಿತು, ಸಮೃದ್ಧವಾಯಿತು.

ಸಮೂಹದಿಂದ ಮೂಡಿಬಂದ ವಚನ ಪ್ರಪಂಚದಲ್ಲಿಯೇ ಅತ್ಯಂತ ವಿಶಿಷ್ಟ ಸಾಹಿತ್ಯ ಪ್ರಕಾರ ಎನಿಸಿತು. ಜಗತ್ತಿನ ಸಾಹಿತ್ಯಲೋಕಕ್ಕೆ ಕನ್ನಡದ ಅಪೂರ್ವ ಕಾಣಿಕೆ ಎನಿಸಿತು. ವಚನಗಳು ಕೇವಲ ಹೇಳಿಕೆಗಳಾಗಲಿಲ್ಲ. ಪ್ರತಿಮೆ, ಪ್ರತೀಕ, ಸಂಕೇತ, ಹೋಲಿಕೆ, ಅಲಂಕಾರ, ದೃಷ್ಟಾಂತ, ಪ್ರಶ್ನೋತ್ತರ, ಸಂಭಾಷಣೆ, ಕಥಾಸೂಚನೆ, ಘಟನಾಮುಖಿ ವಿವರಣೆ ಇವೇ ಮೊದಲಾದ ಹಲವಾರು ಅಂಶಗಳನ್ನು ವಚನಗಳು ಗರ್ಭೀಕರಿಸಿಕೊಂಡು ರಚನೆಗೊಂಡಿವೆ. ಅವುಗಳನ್ನು ಬರೀ ಆಧ್ಯಾತ್ಮ, ಧರ್ಮ, ಉಪದೇಶ, ವಿಡಂಬನೆ ಇವುಗಳಿಗೆ ಸೀಮಿತಗೊಳಿಸದೆ ತಮ್ಮದೇ ಆದ ರೀತಿಯಲ್ಲಿ ವಚನಗಳಲ್ಲಿ ಅಭಿವ್ಯಕ್ತಗೊಳ್ಳುವಂತೆ ವಚನಕಾರರು ಮಾಡಿದರು. ಇದರಿಂದ ವಚನಗಳು ಅನುಭಾವ ಗೀತೆಗಳಾದವು. ಅನುಭವದ ಕೆರೆ, ಹಳ್ಳ, ಬಾವಿ, ವಾರಿಧಿಗಳಾದವು.

**ವಚನಗಳಲ್ಲಿ ಲೋಕಾನುಭವ ಪರಿಕಲ್ಪನೆ**

ನಡೆಯೆಂಬ ಕಣಕದಲ್ಲಿ ವಚನವೆಂಬ ಹೂರಣ ತುಂಬಿ ಆಚಾರವೆಂಬ ಎಣ್ಣೆಯಲಿ ಆಧ್ಯಾತ್ಮವೆಂಬ ಹೋಳಿಗೆಯನ್ನು ಬೇಯಿಸಿ ತೃಪ್ತಿಯಾಗುವಂತೆ ಉಣಬಡಿಸಿದರು ಶರಣರು. ಅದನ್ನು ಅರಗಿಸಿಕೊಂಡವರಲ್ಲಿ ಧರ್ಮದ ಹೊಚ್ಚ ಹೊಸ ಬಿಸಿರಕ್ತ ಹರಿಯಲಾರಂಭಿಸಿತು. ಮರ್ತ್ಯಲೋಕದಲ್ಲಿ ಹುಟ್ಟಿದ ಬಳಿಕ ಮರ್ತ್ಯಲೋಕದ ಎಲ್ಲ ಸುಖದುಃಖಗಳನ್ನು ಅವರು ಅನುಭವಿಸಿದ ಲೋಕಾನುಭವವನ್ನು ಶಿವಾನುಭಾವದಲ್ಲಿ ಕಾಯಿಸಿ ಕರಗಿಸಿ ಮುಕ್ತಿಯ ಮಾರ್ಗಕ್ಕೆ ಸೋಪಾನಗಳನ್ನಾಗಿ ಸಿದರು. ಆತ್ಮಾನುಭವದ ಅಂತರಂಗದ ನಿಲವನ್ನು ಅರಿಯುವಲ್ಲಿ ಲೋಕಾನುಭವವನ್ನು ಸಾತ್ವಿಕಗೊಳಿಸಿ ಕೊಂಡು ಅದನ್ನೇ ಬಳಸಿಕೊಂಡರು.

ಮನುಷ್ಯಜೀವಿ ಈ ಲೋಕದಲ್ಲಿ ಹುಟ್ಟಿದ ಮೇಲೆ ಪ್ರಕೃತಿಯ ನಿಯಮದಂತೆ ದೈಹಿಕವಾಗಿ ಬೆಳೆಯುತ್ತ ಸಾಗುತ್ತಾನೆ. ಮನುಷ್ಯ ಸಮಾಜ ಜೀವಿಯಾದ್ದರಿಂದ ಅವನು ತನ್ನ ಸುತ್ತಲಿನ ಜನರೊಂದಿಗೇ ಜೀವಿಸಬೇಕಾಗುತ್ತದೆ. ತಂದೆ–ತಾಯಿ, ಕುಟುಂಬದ ಸದಸ್ಯರು, ಓಣಿಯಲ್ಲಿನ ಜನರು, ಊರ ಜನರು, ಪ್ರದೇಶದ ಜನರು, ದೇಶದ ಜನರು, ಹೀಗೆ ಅವನ ಸಂಬಂಧ ಸಂಪರ್ಕ ಜನರಿಂದ ಜನರಿಗೆ ಬೆಳೆಯುತ್ತಲೇ ಇರುತ್ತದೆ. ಶರೀರವನ್ನು ಧರಿಸಿಕೊಂಡಿರುವುದರಿಂದ ಅದು ಬದುಕಿ ಇರುವವರೆಗೂ ಅದನ್ನು ಚೆನ್ನಾಗಿ ಕಾಯ್ದುಕೊಂಡು ಕೆಡದಂತೆ ನೋಡಿಕೊಳ್ಳಬೇಕಾಗುತ್ತದೆ. 'ಶರೀರ ಮಾಧ್ಯಂ ಖಲು ಧರ್ಮಸಾಧನಂ' ಎನ್ನುವಂತೆ ಮನುಷ್ಯನು ಏನನ್ನು ಸಾಧಿಸಬೇಕಾದರೂ ಶರೀರದ ಮೂಲಕವೇ ಸಾಧಿಸಬೇಕಾಗುತ್ತದೆ. ಶರೀರದಲ್ಲಿ ಮನಸ್ಸಿದೆ, ಮನಸ್ಸಿನಲ್ಲಿ ಭಾವವಿದೆ, ಭಾವದಲ್ಲಿ ಆತ್ಮವಿದೆ. ಶರೀರವನ್ನು ಶುದ್ಧವಾಗಿಟ್ಟುಕೊಂಡರೆ ಸಾಲದು. ಅದರಲ್ಲಿನ ಮನಸ್ಸು ಭಾವಗಳನ್ನು ಶುದ್ಧವಾಗಿಟ್ಟುಕೊಳ್ಳಬೇಕಾಗುತ್ತದೆ. ಮನುಸ್ಸು ಭಾವಗಳು ಶುದ್ಧವಾಗಿಲ್ಲದೇ ಇದ್ದರೆ ಶರೀರ ಅನಾಚಾರಕ್ಕೆ ಇಳಿಯುತ್ತದೆ. ಅನಾಚಾರದಿಂದ ತನ್ನ ಸುತ್ತಣ ಜನರಿಗೆ ತೊಂದರೆ ಆರಂಭವಾಗುತ್ತದೆ. ಅವರು ಅವನನ್ನು ಹಿಂಸೆ ಮಾಡಲು ತೊಡಗುತ್ತಾರೆ. ಇದರಿಂದ ಸಮಾಜದಲ್ಲಿ ಅನೀತಿ, ಅನಾಚಾರ ಆರಂಭಗೊಂಡು ಸಾತ್ವಿಕ ಜನರ ಬದುಕು ಅಸ್ತವ್ಯಸ್ತವಾಗುತ್ತದೆ. ಇದರಿಂದ ಹಲವು ಜನರಿಗೆ ಕಷ್ಟಗಳುಂಟಾಗುತ್ತವೆ. ಸಮಾಜದ ಆರೋಗ್ಯ ವ್ಯಕ್ತಿಯ ಆರೋಗ್ಯದ ಮೇಲೆ ಅವಲಂಬಿಸಿರುತ್ತದೆ. ಕಾಮ, ಕ್ರೋಧ, ಮದ, ಮತ್ಸರ, ಲೋಭ ಮೋಹಗಳಿಂದ ಕೂಡಿದ ಈ ದೇಹದಲ್ಲಿನ ಆ ಆರು ವೈರಿಗಳನ್ನು ಹಿಡಿತದಲ್ಲಿ ಇಡಲು ಮನಸ್ಸಿನ ಹತೋಟಿ ಅವಶ್ಯವಿದೆ. ಈ ಹತೋಟಿಯನ್ನು ಸಾಧಿಸಬೇಕಾಗುತ್ತದೆ. ತನ್ನಿಂದ ತಾನೇ ಅದು ಬರುವುದಿಲ್ಲ. ವ್ಯಕ್ತಿಯು ತನ್ನ ಮನಸ್ಸು–ಭಾವಗಳನ್ನು ನಿಯಂತ್ರಣದಲ್ಲಿಟ್ಟುಕೊಂಡು ಹಿತಮಿತವಾಗಿ ತನ್ನ ಆಸೆ ಆಕಾಂಕ್ಷೆಗಳನ್ನು ಇನ್ನೊಬ್ಬರಿಗೆ ತೊಂದರೆ ಆಗದಂತೆ ಈಡೇರಿಸಿಕೊಳ್ಳುತ್ತ ಎಲ್ಲರಿಗೂ ನೆಮ್ಮದಿಯಿಂದ ಬದುಕಲು ಅವಕಾಶ ಮಾಡಿಕೊಡುವಂತೆ ಜೀವನ ಸಾಗಿಸಿ ಆತ್ಮೋನ್ನತಿಯ ಪ್ರಶಾಂತ ಬದುಕನ್ನು ಬದುಕಿ

ತೃಪ್ತಿಯ, ಆನಂದದ ತುತ್ತ ತುದಿಯನ್ನು ತಲುಪುವಂತೆ ಜೀವಿಸುವುದೇ ಮನುಷ್ಯನ ಪರಮ ಗುರಿ. ಇದನ್ನೇ ವ್ಯಕ್ತಿಯ ಸಾರ್ಥಕ ಜೀವನ ಎನ್ನುತ್ತಾರೆ. ಇದನ್ನು ಸಾಧಿಸುವುದೇ ಮನುಷ್ಯನ ಆದ್ಯ ಕರ್ತವ್ಯವಾಗಿದೆ. ಈ ಸಾಧನೆಯ ಮಾರ್ಗವನ್ನೇ ಪ್ರಪಂಚದ ಎಲ್ಲ ಧರ್ಮಗುರುಗಳು, ಧರ್ಮದ್ರಷ್ಟಾರರು, ಋಷಿಮುನಿಗಳು, ಮಹಾತ್ಮರು ತೋರಿಸಿಕೊಡುತ್ತ ಬಂದಿದ್ದಾರೆ.

ವಚನಕಾರರು ನಡೆದದ್ದು ನುಡಿದದ್ದು ಮತ್ತು ನಡೆಯುವಂತೆ ಹೇಳಿದ್ದು 'ಅನುಭಾವಮಾರ್ಗ'. ವಚನಕಾರರಿಗಿಂತ ಮುಂಚೆ ಈ ಮಾರ್ಗವನ್ನು ವೇದೋಪನಿಷತ್‌ಕಾರರೇ ಹೇಳಿದ್ದರು. ಆದರೆ ಕಾಲಾನುಕ್ರಮದಲ್ಲಿ ಈ ಮಾರ್ಗವನ್ನು ಮರೆತ ಜನರು ಸಮಾಜದಲ್ಲಿ ಅಸ್ತವ್ಯಸ್ತತೆಯನ್ನು ಹರಡಿ ಬಹು ಜನರ ಬದುಕನ್ನು ಅಸಹನೀಯವನ್ನಾಗಿ ಮಾಡಿದ್ದರು. ಮನುಷ್ಯ ಮನುಷ್ಯರಲ್ಲಿ ಮೇಲು ಕೀಳು ವಿಭಾಗ ಮಾಡಿ ಕೀಳುಜನರನ್ನು ಹೊರಗೆ ಇಟ್ಟು ಶೋಷಣೆ ಮಾಡತೊಡಗಿದ್ದರು. ಜ್ಞಾನಗಳಿಕೆಯ, ಧನಗಳಿಕೆಯ ಮಾರ್ಗಗಳನ್ನು ಅವರಿಗೆ ಮುಚ್ಚಿಹಾಕಿದ್ದರು. ದುರ್ಬಲರನ್ನು, ಸ್ತ್ರೀಯರನ್ನು ಅಂಧಕಾರದಲ್ಲಿ ಇಟ್ಟು ಅವರ ಸ್ವಾತಂತ್ರ್ಯಹರಣ ಮಾಡಿದ್ದರು. ಮೂಢನಂಬಿಕೆಗಳನ್ನು ಜನರಲ್ಲಿ ಹರಡಿ ಸಮಾಜದ ಮೇಲ್ವರ್ಗದವರಿಗೆ ಮಾತ್ರ ಎಲ್ಲ ಸೌಲಭ್ಯ ದೊರಕುವಂತೆ ಮಾಡಿದ್ದರು. ಪರಂಪರಾಗತ ಧರ್ಮಗಳು ಒಳ್ಳೆಯ ತತ್ತ್ವಗಳನ್ನು ಹೊಂದಿದ್ದರೂ ಮೇಲ್ವರ್ಗದವರು, ಧರ್ಮಾಧಿಕಾರಿಗಳು, ಪುರೋಹಿತರು ಅವುಗಳನ್ನು ತಮತಮಗೆ ಅನುಕೂಲ ಮಾಡಿಕೊಂಡಿದ್ದರು. ಧರ್ಮದ ಹೆಸರಿನಲ್ಲಿ ಇದ್ದುದೊಂದು ಅವರು ಮಾಡುವುದು ಮತ್ತೊಂದು ಆಗಿತ್ತು. ಅವರು ಮಾಡಿದ್ದೇ ಧರ್ಮ ಎನ್ನುವಂತಾಗಿತ್ತು. ಅವರನ್ನು ಪ್ರಶ್ನಿಸುವವರು ಯಾರೂ ಇರಲಿಲ್ಲ. ವಚನಕಾರರ ವೇಳೆಗೆ ಅಂದರೆ 11–12ನೆಯ ಶತಮಾನದ ವೇಳೆಗೆ ಸಾಮಾಜಿಕ ಸ್ಥಿತಿ ಹದಗೆಟ್ಟಿತ್ತು. ಹದಗೆಟ್ಟ ಸಮಾಜವನ್ನು ಹೇಗೆ ಆರೋಗ್ಯಪೂರ್ಣ ಸಮಾಜವನ್ನಾಗಿ ಪರಿವರ್ತಿಸಬೇಕೆಂದು ಶಿವಶರಣರು ಚಿಂತಿಸಿದರು. ಪರಿಸರ ಸುಧಾರಿಸದೇ ವ್ಯಕ್ತಿ ಸುಧಾರಿಸಲಾರ. ವ್ಯಕ್ತಿ ಸುಧಾರಿಸದೇ ಪರಿಸರ ಸುಧಾರಿಸಲಾರದು ಎಂಬುದನ್ನು ಅರಿತ ವಚನಕಾರರು ಪರಿಸರಕ್ಕೆ ತೀವ್ರ ಪ್ರತಿಕ್ರಿಯಿಸಿದರು. ಅದರ ಫಲವೇ ವಚನಗಳ ಸೃಷ್ಟಿ, ಸಮಾಜದ ಮೊದಲ ಮಹತ್ವದ ಘಟಕವೆನಿಸಿದ ವ್ಯಕ್ತಿಯನ್ನು ಮಾನಸಿಕವಾಗಿ, ದೈಹಿಕವಾಗಿ ಆರೋಗ್ಯಗೊಳಿಸುವುದು, ಶುಚಿಗೊಳಿಸುವುದು. ಹಾಗೆ ಮಾಡಿದಾಗ ಸಮಾಜ ತಂತಾನೇ ಶುಚಿಯಾಗಿ ನವ ಸಮಾಜವೊಂದು ನಿರ್ಮಾಣವಾಗುವುದು ಎಂಬುದನ್ನು ಮನಗಂಡು ವಚನಕಾರರು ಲೋಕಾನುಭವದಿಂದ ಶಿವಾನುಭವಕ್ಕೆ ಸೋಪಾನ ಕಟ್ಟಿದರು. ಸಮಾಜ–ಧರ್ಮ–ವ್ಯಕ್ತಿ ಈ ಮೂರರಲ್ಲಿರುವ ಕೊಳೆಯನ್ನು ಏಕಕಾಲಕ್ಕೆ ತೊಳೆಯಲು ಅವರು ಶಿವಾನುಭವವನ್ನು ಸಮರ್ಥವಾಗಿ ಬಳಸಿಕೊಂಡರು.

ಪ್ರಪಂಚದಲ್ಲಿ ಮನುಷ್ಯ ಎಂಬ ಪ್ರಾಣಿ ತಾನು ಬದುಕಿರುವವರೆಗೂ ಅನೇಕ ಅನುಭವಗಳನ್ನು ಪಡೆಯುತ್ತಾನೆ. ಅನುಭವ ಎಂಬುದು ಮೂರ್ತದ ಅನಿಸಿಕೆ ಆಗಿರುತ್ತದೆ. ಉದಾಹರಣೆಗೆ, ಸಕ್ಕರೆ ಸಿಹಿಯಾಗಿದೆ ಎಂದು ಹೇಳಿದರೆ ಸಿಟಯ ಅನುಭವವನ್ನು ಹೊಂದಿದ ವ್ಯಕ್ತಿ ಮಾತ್ರ ಅದನ್ನು ಪರಿಭಾವಿಸಿಕೊಳ್ಳುತ್ತಾನೆ. ಹೀಗೆಯೇ 'ಅವನು ಎಡವಿದನು' ಎಂದು ಹೇಳಿದರೆ ಎಡವುವ ಕ್ರಿಯೆಯನ್ನು ತಾನೂ ಒಮ್ಮೆ ಅನುಭವಿಸಿದ ವ್ಯಕ್ತಿಗೆ ತಟ್ಟನೆ ಅದರ ಕಲ್ಪನೆ ಬರುತ್ತದೆ. ಇದರಂತೆ ವ್ಯಕ್ತಿ ತನ್ನ ಬದುಕಿನಲ್ಲಿ ಅನೇಕ ರೀತಿಯ ಅನುಭವಗಳನ್ನು ನೋಡಿ, ತಿಳಿದು, ಸ್ವತಃ ಅನುಭವಿಸಿ ಅರ್ಥಮಾಡಿಕೊಂಡಿರುತ್ತಾನೆ. ಅನುಭವದ ಪರಿಣಾಮವೂ ಅವನಿಗೆ ತಿಳಿದಿರುತ್ತದೆ. ಯಾವ ಪ್ರಾಣಿಯೂ 'ಅನುಭವ'ದ ಹಂತವನ್ನು ಹೊಂದಿರುತ್ತದೆ. ಇನ್ನು ಅನುಭವದ ಕಲ್ಪನೆ ಅಮೂರ್ತವಾಗಿಯೂ ಇರಬಹುದು. ಉದಾಹರಣೆಗೆ

'ಸ್ವರ್ಗದಲ್ಲಿ ಸುಖವಿಚ್ಚೆ' ಎಂದಾಗ ಸ್ವರ್ಗವನ್ನು ಯಾರೂ ನೋಡಿಲ್ಲ, ಅಲ್ಲಿನ ಸುಖವನ್ನು ಅನುಭವಿಸಿಲ್ಲ. ಆದರೂ ಅದನ್ನು ಮನುಷ್ಯ ನಂಬುತ್ತಾನೆ. ಸ್ವತಃ ತಾನು ಅನುಭವಿಸಲಾರ ಆದರೆ ಪರಿಕಲ್ಪನೆಯನ್ನು ಮಾಡಿಕೊಳ್ಳಬಲ್ಲ ಶಕ್ತಿ ಮನುಷ್ಯನ ಮನಸ್ಸಿಗೆ ಮಾತ್ರ ಉಂಟು. ಹೀಗೆ, ಅನುಭವ ಮೂರ್ತದಿಂದ ಅಮೂರ್ತದಿಂದ ಎರಡು ಬಗೆಯಾಗಿರುತ್ತದೆ. ಮೂರ್ತದಿಂದ ಆಗುವ ಅನುಭವಗಳೆಲ್ಲವೂ ಸಾಮಾನ್ಯವಾಗಿ ಲೌಕಿಕ ಅನುಭವಗಳು. ಅಂದರೆ ಮನುಷ್ಯ ಈ ಭವ ಅಂದರೆ ಲೋಕದಲ್ಲಿ ಪ್ರತ್ಯಕ್ಷದಲ್ಲಿ ಅನುಭವಿಸುವ ಅನುಭವಗಳೂ, ತನ್ನ ಮನದಾಳದಲ್ಲಿಯೆ ಕಲ್ಪನೆಯ ಮೂಲಕ ಪರಿಭಾವಿಸಿಕೊಳ್ಳುವ ಅಲೌಕಿಕ ಅನುಭವಗಳೂ ಉಂಟು. ಅಲೌಕಿಕ ಅನುಭವವೂ ಒಂದು ಹಂತದವರೆಗೆ ಮಾತ್ರ ನಿಲ್ಲುತ್ತದೆ. ಕನಸುಗಳು ಎಷ್ಟೋ ಸಲ ಅಲೌಕಿಕ ಅನುಭವದಂತೆ ಕ್ಷಣಿಕವಾದವುಗಳು. ಅನುಭವಗಳು ಮರುಕಳಿಸಬಹುದು. ನೆನಪಿಗೆ ಬರಬಹುದು. ಆದರೆ ಇವುಗಳಿಗೆ ಸೀಮೆ ಇದೆ. ಮನುಷ್ಯನ ಮನಸ್ಸಿನ ವ್ಯಾಪಾರಕ್ಕನುಗುಣವಾಗಿ ಇವು ಉದ್ಭೂತವಾಗುತ್ತ ಇರುತ್ತವೆ. ಮನಸ್ಸಿನ ವಲಯದಲ್ಲಿ ಅನುಭವಗಳು ವಿಭಿನ್ನವಾಗಬಹುದು. ಅಂತೆಯೇ ಒಬ್ಬರಿಗೆ ಸುಂದರವಾಗಿ ಕಾಣುವ ವಸ್ತು ಇನ್ನೊಬ್ಬರಿಗೆ ಅಸಹ್ಯವೆನಿಸಬಹುದು. ಮನಸ್ಸಿನ ಚಂಚಲತೆಗಳಿಂದಾಗಿ ಅನುಭವದ ಪರಿಯೂ ಬೇರೆಬೇರೆಯಾಗಿರುತ್ತದೆ. ಅಂತೆಯೇ ಮನುಷ್ಯರು ಭಿನ್ನ ಭಿನ್ನ ರುಚಿಗಳನ್ನು ಹೊಂದಿರುತ್ತಾರೆ.

ಬಸವಪೂರ್ವಕಾಲೀನ ವಚನಕಾರರಲ್ಲಿ ಜೇಡರ ದಾಸಿಮಯ್ಯನ ವಚನಗಳು ನೂರು ನೂರೈವತ್ತರಷ್ಟು ದೊರೆಯುತ್ತವೆ. ಆದರೆ ಕೆಂಭಾವಿ ಭೋಗಣ್ಣ, ಕೊಂಡಗುಳಿ ಕೇಶಿರಾಜ, ತೆಲುಗು ಜೊಮ್ಮಯ್ಯ, ಶಂಕರ ದಾಸಿಮಯ್ಯ, ಸಕಳೇಶ ಮಾದರಸ ಮುಂತಾದವರ ವಚನಗಳು ಅಷ್ಟಾಗಿ ದೊರೆತಿಲ್ಲ. ಆದಯ್ಯನ ವಚನಗಳು ಸಾಕಷ್ಟು ದೊರೆತಿವೆ. ಈ ವಚನಕಾರರಲ್ಲಿ ಕೆಲವರು ಬಸವಣ್ಣನ ಹಿರಿಯ ಸಮಕಾಲೀನರೂ ಆಗಿರಬಹುದು. ಬಸವಣ್ಣ ಸಣ್ಣ ವಯಸ್ಸಿನಲ್ಲಿದ್ದಾಗ ಇವರು ಆಗಲೇ 40–50 ವರ್ಷಗಳ ಹಿರಿಯರಾಗಿ ತಮ್ಮ ತಮ್ಮ ಸಾಮರ್ಥ್ಯಕ್ಕನುಗುಣವಾಗಿ ಸಾಮಾಜಿಕ, ಧಾರ್ಮಿಕ ಪರಿವರ್ತನೆಯ ಚಳವಳಿಯನ್ನು ಸಣ್ಣಗೆ ಹುಟ್ಟುಹಾಕಿದ್ದರು. ಅವರ ಲೋಕಾನುಭವದ ವಚನಗಳಲ್ಲಿ ಚಳವಳಿಯ ಎಳೆಗಳು ನಮಗೆ ದೊರೆಯುವುದರ ಜೊತೆಗೆ ಇಹ ಲೋಕದ ಅನುಭವ ಅವರಲ್ಲಿ ಎಷ್ಟು ಗಾಢವಾಗಿದೆಯೆಂಬುದೂ ತಿಳಿಯುತ್ತದೆ. 'ಹೊಟ್ಟೆ' ಈ ಲೋಕದಲ್ಲಿ ಏನೆಲ್ಲ ಮಾಡಿಸುತ್ತದೆ. ಅಂತೆಯೇ ಸಮಾಜದಲ್ಲಿ ವ್ಯಕ್ತಿ ಹೊಟ್ಟೆಯನ್ನು ಹೊರೆಯಲೇ ಬೇಕಲ್ಲವೇ? ಜೇಡರ ದಾಸಿಮಯ್ಯ ಶಿವನಿಗೆ ಈ ವಾಸ್ತವ ಸಂಗತಿಯನ್ನು ಹೇಳಿ ಒಮ್ಮೆ ನೀನೂ ಹೊಟ್ಟೆಪಾಡು ಎಂತಹುದೆಂಬುದನ್ನು ಅರಿಯಲು ಈ ಲೋಕದಲ್ಲಿ ಹುಟ್ಟಿ ಬಾ ಆಗ ಗೊತ್ತಾಗುತ್ತದೆ ಎಂದು ಸವಾಲು ಎಸೆಯುತ್ತಾನೆ. ಲೋಕದಲ್ಲಿ ಹುಟ್ಟಿದವರು ಕೆಲಕೆಲವು ಮಹತ್ವದ ಕಾರ್ಯವನ್ನು ಮಾತ್ರ ಮಾಡಬಲ್ಲರು. ತುಂಬಿದ ಸಭೆಗೆ ಸಭೆಯೇ ದಾನ ನೀಡಬಹುದೆ? ಯುದ್ಧಕ್ಕೆ ಹೋದವರು ಎಲ್ಲರೂ ಸಾಯುತ್ತಾರೆಯೇ? ಚೆನ್ನಾಗಿ ಯುದ್ಧ ಮಾಡಬಲ್ಲವರು ನೂರಕ್ಕೊಬ್ಬ, ಸಾವಿರಕ್ಕೊಬ್ಬ ಇದ್ದಾನು. ಹುಣಸೆಯ ಹೂವು ಎಲ್ಲವೂ ಕಾಯಾಗುತ್ತದೆಯೇ? ಎಂದು ಕೇಳುವಲ್ಲಿ ದಾಸಿಮಯ್ಯನ ಲೋಕಾನುಭವ ನಮ್ಮನ್ನು ದಂಗುಬಡಿಸುತ್ತದೆ.

ಮಾದಾರ ಚೆನ್ನಯ್ಯನ ಕುಲದ ಬಗೆಗೆ ಹೇಳಿದ ಲೋಕಾನುಭವ–ನಡೆ ನುಡಿಗಳಲ್ಲಿ ತತ್ತ್ವವಿರಬೇಕು. ಹಾಗಿದ್ದರೆ ಯಾವ ಹೊಲೆತನ ಸೂತಕ ಇಲ್ಲ. ಚೆನ್ನಾಗಿ ಮಾತಾಡಿ ನಡೆಯಲ್ಲಿ ಕೀಳು. ಆದರೆ ಅದುವೆ ಹೊಲೆತನ, ಕಳ್ಳ ವ್ಯಾಪಾರ ಮುಂತಾದವುಗಳಲ್ಲಿ ಕೆಟ್ಟು ನಡೆಯುವವರನ್ನು ಕುಲಜ ಎನ್ನಲು ಆದೀತೆ? ಆಚಾರವೇ ಕುಲ ಅನಾಚರವೇ ಹೊಲೆ ಎಂದು ಚೆನ್ನಯ್ಯ ಒತ್ತಿ ಹೇಳಿದ್ದಾನೆ.

ಆಚಾರವೇ ಸ್ವರ್ಗ ಅನಾಚರವೇ ನರಕ ಎಂಬ ಬಸವಣ್ಣನ ವಚನ ಇಲ್ಲಿ ನೆನಪಿಗೆ ಬರುತ್ತದೆ. ಬಸವಣ್ಣನಿಗೆ ಮಾದಾರ ಚೆನ್ನಯ್ಯನ ಮೇಲೆ ಅಪಾರ ಗೌರವವಿತ್ತು. ಮಾದಾರ ಚೆನ್ನಯ್ಯನ ಭಕ್ತಿಗೆ ಮೆಚ್ಚಿ ಶಿವನು ಅವನ ಮನೆಗೇ ಹೋಗಿ ಅಂಬಲಿಯನ್ನು ಉಂಡ ಘಟನೆಯನ್ನು ಹರಿಹರಕವಿ ತುಂಬ ಸ್ವಾರಸ್ಯಕರವಾಗಿ ವರ್ಣಿಸಿದ್ದಾನೆ.

**ಬಸವಯುಗದ ವಚನಕಾರರ ಲೋಕಾನುಭವ**

ತನಗಿಂತ ಹಿಂದಿನಕಾಲದಲ್ಲಿದ್ದ ವಚನಕಾರರು ಆರಂಭಿಸಿದ ವೀರಶೈವ ಆಂದೋಲನದ ಚುಕ್ಕಾಣಿ ಬಸವಣ್ಣನ ಕೈಗೆ ಬಂದದ್ದು 12ನೆಯ ಶತಮಾನದ ಒಂದು ಜಾಗತಿಕ ದಾಖಲೆಯ ಅದ್ಭುತ ಸಂಗತಿ. ವೀರಶೈವ ಆಗಲೆ ಒಂದು ಸಂಕ್ರಮಣ ಅವಸ್ಥೆಯನ್ನು ದಾಟಿ ಬಂದಿತ್ತು. ವೀರಶೈವ ಆಂದೋಲನಕ್ಕೆ ಹೆಸರಾದ ಅನೇಕ ಶಿವಶರಣರ ಪ್ರಯತ್ನದಿಂದ ಚಳವಳಿ ಬಸವಣ್ಣನ ಅತ್ಯದ್ಭುತ ವ್ಯಕ್ತಿತ್ವದ ಚುಂಬಕ ಶಕ್ತಿಯ ಸ್ಪರ್ಶದಿಂದ ಒಮ್ಮಿಂದೊಮ್ಮೆಲೆ ಕಲ್ಯಾಣದಲ್ಲಿ ಭುಗಿಲೆದ್ದಿತು. ಅಲ್ಲಲ್ಲಿ ಬಿಡಿ ಬಿಡಿಯಾಗಿ ವೈಯಕ್ತಿಕ ನೆಲೆಯಲ್ಲಿ ಚಳವಳಿ ನಡೆಸುತ್ತಿದ್ದವರೆಲ್ಲ ಕಲ್ಯಾಣದಲ್ಲಿ ಕೇಂದ್ರೀಕೃತವಾದರು. ಬಸವಣ್ಣನ ನೇತೃತ್ವ ಶಿವಶರಣರಿಗೆ ದಕ್ಕಿದ್ದು ಒಂದು ಅಪೂರ್ವ ಯೋಗಾಯೋಗ. ಕ್ರಾಂತಿಯ ಕನಸು ಕಾಣುತ್ತಿದ್ದ ಬಸವಣ್ಣನಿಗೆ ತನ್ನಂತೆಯೆ ಆಲೋಚನೆ ಮಾಡುತ್ತಿದ್ದ ಹಿರಿಯ ಶರಣರು, ಸಿದ್ಧರಾಮ, ಮಡಿವಾಳ ಮಾಚಿದೇವನಂಥ ಕಾರ್ಯಶೀಲ ಶರಣರು, ಚನ್ನಬಸವಣ್ಣನಂಥ ಪ್ರತಿಭಾಸಂಪನ್ನ ಶರಣರು ಕಣ್ಣನ್ನೆ ಮಾತ್ರದಿಂದ ಎದ್ದು ನಿಲ್ಲುತ್ತಿದ್ದ ದಲಿತ ಶರಣರು ದೊರೆತಿದ್ದು ಬಸವಣ್ಣನಿಗೆ ತವನಿಧಿ ದೊರೆತಂತಾಗಿತ್ತು. ಇವ ನಮ್ಮವ ಇವ ನಮ್ಮವ ಎನಿಸಿ ಎಲ್ಲರನ್ನೂ ಕಟ್ಟಿಕೊಂಡು ಮೇಲೆದ್ದನು. ರಾಜಶಕ್ತಿ ಬಸವಣ್ಣನಿಗೆ ನೆಪವಾಗಿತ್ತು. ಅವನ ಮುಖ್ಯ ಕಾರ್ಯವೆಲ್ಲ ತಾನು ಕಟ್ಟ ಬಯಸಿದ ಹೊಸ ಸಮಾಜದದೆಡೆಗೆ ಇತ್ತು. ವಿವಿಧ ಜಾತಿ ಮತ ಪಂಥ, ಪ್ರದೇಶ, ಸ್ತರಗಳಿಂದ ಬಂದು ಶಿವಭಕ್ತರಾದರವನ್ನು ಪ್ರಜ್ಞಾವಂತರನ್ನಾಗಿ ಮಾಡಿ ಅವರು ಸನ್ಮಾರ್ಗದಲ್ಲಿ ನಡೆಯುವಂತೆ ಮಾಡುವ ಅತ್ಯಂತ ಜವಾಬ್ದಾರಿಯುತ ಕಾಯಕವನ್ನು ಬಸವಣ್ಣ ಹೊತ್ತುಕೊಂಡಿದ್ದ. ಎಲ್ಲ ವಚನಕಾರರಿಗೂ ಬಸವಣ್ಣನೇ ಆದರ್ಶ. ಅವನೇ ಕೇಂದ್ರ ವ್ಯಕ್ತಿ, ಅಂತೆಯೇ ಪ್ರತಿಯೊಬ್ಬ ವಚನಕಾರನೂ ಬಸವಣ್ಣನನ್ನು ಹೊಗಳದೇ ಬಿಟ್ಟಿಲ್ಲ. ಹೊಗಳಿ ಹೊಗಳಿ ಎನ್ನ ಹೊನ್ನ ಶೂಲದಲಿಕ್ಕಿದರು ಎಂದು ಬಸವ ಪರಿತಪಿಸಿದ್ದು ಇದಕ್ಕಾಗಿಯೇ. ಕೆಲವರಿಗಂತೂ ಬಸವಣ್ಣನೇ ದೈವಸ್ವರೂಪಿಯಾಗಿಬಿಟ್ಟ.

ಭಕ್ತಿಯ ಹೊನಲು ಪ್ರವಾಹೋಪಾದಿಯಲ್ಲಿ ಕಲ್ಯಾಣದ ತುಂಬ ಸೂಸತೊಡಗಿತು. ಲಕ್ಷದ ಮೇಲೆ ತೊಂಬತ್ತಾರು ಸಾವಿರ ಭಕ್ತರು ದಿನವೂ ಬಸವಣ್ಣನ ಅನುಭವ ಮಂಟಪದಲ್ಲಿ ಸೇರುತ್ತಿದ್ದರು. ತಮ್ಮ ತಮ್ಮ ಅನುಭವ ಅನುಭಾವಗಳನ್ನು ಹಂಚಿಕೊಳ್ಳುತ್ತಿದ್ದರು. ಸ್ವಇಚ್ಛೆಯಿಂದ ವೀರಶೈವ ಭಕ್ತರಾಗುವವರ ಸಂಖ್ಯೆ ದಿನದಿನಕ್ಕೆ ಹೆಚ್ಚುತ್ತಲೇ ನಡೆಯಿತು. ಸಾಮೂಹಿಕ ಮತಾಂತರದಂತೆ ತೀವ್ರವಾಗಿ ನಡೆದ ಚಟುವಟಿಕೆಗಳಲ್ಲಿ ಕಪಟ ಶಿವಭಕ್ತರೂ ಸ್ವಾರ್ಥಕ್ಕಾಗಿ ಸೇರಿಕೊಂಡಿರಬೇಕು. ಅದನ್ನು ಕೆಲವು ವಚನಕಾರರು ಗುರುತಿಸಿ ಅಂಥ ಕಪಟ ಭಕ್ತರನ್ನು ಬಯಲಿಗೆಳೆದದ್ದೂ ಉಂಟು. ಅಂಬಿಗರ ಚೌಡಯ್ಯ ಇದನ್ನು ಕಂಡು ಬೇಸರಗೊಂಡು ಭಕ್ತನಾದ ಬಳಿಕ ತಾನು ಹಿಂದೆ ಮಾಡುತ್ತಿದ್ದ ಪೂಜೆ, ಆಚಾರ ವಿಚಾರಗಳನ್ನು ಬಿಟ್ಟು ಇಷ್ಟಲಿಂಗವೊಂದನ್ನೇ ನಂಬಿ ಶಿವನನ್ನು ಮೊರೆ ಹೋಗಬೇಕು. ಅದನ್ನು ಬಿಟ್ಟು ಮತ್ತೆ ಮಾಡಿದ ತಪ್ಪನ್ನೇ ಮಾಡುತ್ತ ಹೋದರೆ ಅವನನ್ನು ಭಕ್ತನೆಂದು ಹೇಗೆ ಹೇಳುವುದು? ಪರಂಪರಾಗತವಾಗಿ ನಡೆದುಕೊಂಡು ಬಂದ ಆಚರಣೆಗಳನ್ನು, ಮೂಢನಂಬಿಕೆಗಳನ್ನು ತೊಡೆದುಹಾಕುವುದು ಬಸವಾದಿ ಶರಣರಿಗೆ ಸುಲಭದ ಮಾತಾಗಿರಲಿಲ್ಲ. ಆರಂಭದ ಆ ದಿನಗಳಲ್ಲಿ ಒಂದೇ ಸಂಸಾರದಲ್ಲಿ ಗಂಡ ಶಿವಭಕ್ತನಾಗಿ ಪರಿವರ್ತನೆ ಹೊಂದಿದರೆ ಹೆಂಡತಿ ಶಿವಭಕ್ತಳಾಗದೆ ತನ್ನ ಪರಂಪರೆಯಲ್ಲಿ ಕೆಟ್ಟ ಆಚಾರಗಳಲ್ಲಿ ತೊಡಗಿದ್ದ

ಸನ್ನಿವೇಶಗಳೂ ಆಗ ಇದ್ದವು. ಬಸವಣ್ಣನ ಒಂದು ಲೋಕಾನುಭವದ ವಚನ ಅದನ್ನು ಸ್ಪಷ್ಟಪಡಿಸುತ್ತದೆ.

***ಗಂಡ ಶಿವಲಿಂಗ ದೇವರ ಭಕ್ತ***
***ಹೆಂಡತಿ ಮಾರಿ ಮಸಣಿಯ ಭಕ್ತೆ***
***ಗಂಡ ಕೊಂಬುದು ಪಾದೋದಕ ಪ್ರಸಾದ***
***ಹೆಂಡತಿ ಕೊಂಬುದು ಸುರೆ ಮಾಂಸ***
***ಭಾಂಡ ಭಾಜನ ಶುದ್ಧವಿಲ್ಲದವರ ಭಕ್ತಿ***
***ಹೆಂಡದ ಮಡಿಕೆಯ ಹೊರಗೆ ತೊಳೆದಂತೆ ಕೂಡಲ ಸಂಗಮದೇವಾ***

ಗಂಡ – ಹೆಂಡರ ಸಂಸಾರ ಒಂದು ನಾಣ್ಯದ ಎರಡು ಮುಖಗಳಿದ್ದಂತೆ. ಎತ್ತು ಏರಿಗೆಳೆದರೆ ಕೋಣ ನೀರಿಗೆಳೆಯಿತು ಎಂಬಂತೆ ಗಂಡ – ಹೆಂಡರು ಒಬ್ಬರೊಬ್ಬರೂ ಒಂದೊಂದು ಧರ್ಮವನ್ನಾಚರಿಸಿದರೆ ಹೇಗೆ? ಗಡಿಗೆಯನ್ನು ಹೊರಗೆ ಅಷ್ಟೇ ತೊಳೆದರೆ ಸಾಕೆ? ಅಂದರೆ ಹೊರಗೆ ಕೆಲಸ ಮಾಡುವ ಗಂಡನೊಬ್ಬನೇ ಶುದ್ಧನಾದರೆ ಸಾಕೆ? ಮನೆಯ ಒಳಗಿರುವ ಹೆಂಡತಿ ಅಂದರೆ ಗಡಿಗೆಯ ಒಳಭಾಗವೂ ಶುದ್ಧವಾಗದೇ ಇದ್ದರೆ ಏನು ಪ್ರಯೋಜನ? ಧರ್ಮಾಚರಣೆಯಲ್ಲಿ ಹೆಣ್ಣುಮಕ್ಕಳೂ ಗಂಡಸರಷ್ಟೇ ಮುಂದುವರೆಯಬೇಕೆಂಬ ಮಾತನ್ನು ಬಸವಣ್ಣ ಮನತುಂಬುವಂತೆ ವಿವರಿಸಿದ್ದಾನೆ.

### ಭಕ್ತಿ ಭಂಡಾರ ಬಸವಣ್ಣನವರ ವಚನಗಳಲ್ಲಿ ಲೋಕಾನುಭವ

ಮೌಖಿಕವಾಗಿ ಆರಂಭವಾದ ವಚನ ವಾಹಿನಿ ಶಾಂತರಸ, ಸಂಕಣ್ಣರಂತ ಶಿವಶರಣರಿಂದ ಲಿಖಿತ ರೂಪದಲ್ಲಿ ದಾಖಲಾಗಲು ಮೊದಲುಗೊಂಡಿತು. 12ನೆಯ ಶತಮಾನದಲ್ಲಿ ಈ ರೀತಿಯಲ್ಲಿ ಸಹಸ್ರಾರು ಶಿವಶರಣರು ವಚನ ರಚನೆ ಮಾಡಿದರು. ಆದರೆ ಕಲ್ಯಾಣದಲ್ಲಿ ನಡೆದ ಕ್ರಾಂತಿಯ ಫಲವಾಗಿ ಅಸಂಖ್ಯಾತ ವಚನ ಸಾಹಿತ್ಯ ನಷ್ಟವಾಗಿ ಹೋಯಿತು. 14–15ನೆಯ ಶತಮಾನದ ವೇಳೆಗೆ ಶೂನ್ಯ ಸಂಪಾದನಕಾರರು ತಮಗೆ ಸಿಕ್ಕ ವಚನಗಳನ್ನು ಮುಂದಿಟ್ಟುಕೊಂಡು 12ನೆಯ ಶತಮಾನದಲ್ಲಿ 'ಅನುಭಾವ' ಗೋಷ್ಠಿಯಲ್ಲಿ ಮೂಡಿಬಂದಿರ ಬಹುದಾದ ವಚನ ರಚನೆಯ ಕಲ್ಪನೆಯನ್ನು ಮಾಡಿಕೊಂಡು ಅವುಗಳನ್ನು ಸರಿಯಾಗಿ ಸಂಭಾಷಣೆಯ ರೂಪದಲ್ಲಿ ಹೊಂದಿಸಿಕೊಂಡು ನಾಟಕೀಯ ಸನ್ನಿವೇಶದ ರೀತಿಯಲ್ಲಿ ವಚನಗಳಲ್ಲಿ ಮೂಡಿಬಂದ ಶರಣರ ತತ್ವಗಳನ್ನು, ಅವರ ಅನುಭಾವದ ಸ್ವರೂಪವನ್ನು ಆಕರ್ಷಕವಾಗಿ ಮತ್ತೆ ಕಟ್ಟಿಕೊಟ್ಟರು. ಹೀಗಾಗಿ ಶೂನ್ಯ ಸಂಪಾದನೆಗಳು ವಚನಗಳ ಆಧಾರದ ಮೇಲೆ ಸಿದ್ಧವಾದ ಅಪೂರ್ವ ಕೃತಿಗಳೆನಿಸಿದವು. ತೋಂಟದ ಸಿದ್ಧಲಿಂಗ ಯತಿಗಳ ಕಾಲದಲ್ಲಿ ಶರಣರ ವಚನಗಳ ಅಧ್ಯಯನ ಮತ್ತೆ ಚಿಗುರಿತು. ಆಧುನಿಕ ಕಾಲದಲ್ಲಿ 19, 20ನೆಯ ಶತಮಾನದಲ್ಲಿ ವಚನಗಳ ಸಂಗ್ರಹ, ಸಂಪಾದನೆ, ಸಂಶೋಧನೆ, ಅಧ್ಯಯನ ವ್ಯಾಪಕವಾಗಿ ಆರಂಭಗೊಂಡಿತು.

ಶಿವಶರಣರ ವಚನಗಳ ವಸ್ತು ಮೂಲಭೂತವಾಗಿ ಭಕ್ತಿ ಭಕ್ತಿಗೆ ಪೂರಕವಾಗುವ ಪರಿಶುದ್ಧ ಆಚರಣೆ, ಆಚರಣೆಗೆ ಅನುಗುಣವಾದ ಆಧ್ಯಾತ್ಮ ಚಿಂತನೆ ಇವುಗಳಲ್ಲಿ ಒಳಗೊಂಡಿದೆ. ಆಧ್ಯಾತ್ಮಕ್ಕೂ ಆಚರಣೆಗೂ ಅಂತರವಾದಲ್ಲಿ, ಸಂದೇಹಗಳು ಉಂಟಾದಲ್ಲಿ ಅವರು ಆಳವಾಗಿ ವೈಚಾರಿಕ ನೆಲೆಯಲ್ಲಿ ಚಿಂತಿಸಿದ್ದಾರೆ. ಪರಿಹಾರ ಕಂಡುಕೊಂಡಿದ್ದಾರೆ. ಅಲ್ಲಮಪ್ರಭು ಪ್ರಾಯಶಃ ಅತ್ಯಂತ ಹಿರಿಯ, ಜ್ಞಾನದ ಶಿಖರವನ್ನು ಮುಟ್ಟಿದ ಶರಣ. ಉಳಿದ ಶಿವಶರಣರಿಗೆ ಉಂಟಾದ ಸಂದೇಹಗಳೆಲ್ಲವನ್ನೂ ಅವನು ಅನಾಯಾಸದಿಂದ ಪರಿಹರಿಸಿದ್ದಾನೆ. ಇನ್ನೂರ ಮೂವತ್ತಕ್ಕೂ ಹೆಚ್ಚು ಸಂಖ್ಯೆಯ ವಚನಕಾರರ ಸುಮಾರು ಎರಡೂವರೆ ಸಾವಿರ ವಚನಗಳು ಮಾತ್ರ ಲಭ್ಯವಾಗಿವೆ. ಮೂವತ್ತಕ್ಕೂ ಹೆಚ್ಚು ಸಂಖ್ಯೆಯ ಶಿವಶರಣೆಯರ ವಚನಗಳು ದೊರೆತಿವೆ. ವೇಶ್ಯಾವೃತ್ತಿಯ ಸಂಕವ್ವೆಯೆಂಬುವವರೂ ವಚನ ರಚಿಸಿದ್ದಾರೆ ಎನ್ನುವುದಕ್ಕೆ ಸಾಕ್ಷಿ. ಆದರೆ ಕಾಲಗರ್ಭದಲ್ಲಿ ಬಹಳಷ್ಟು ವಚನಗಳು ಅಡಗಿಹೋಗಿವೆ. ವಚನಗಳ ಸೃಷ್ಟಿ 12ನೆಯ ಶತಮಾನದಿಂದ ಆರಂಭವಾಗಿ ಕಲ್ಯಾಣ ಕ್ರಾಂತಿಯ ಆನಂತರ ಒಂದೆರಡು ಶತಮಾನ ನಿಂತು

ಮತ್ತೆ ಮುಂದುವರೆಯಿತು. 12ನೆಯ ಶತಮಾನದ ವಚನಕಾರರ ಪರಂಪರೆ 17ನೆಯ ಶತಮಾನದ ಷಣ್ಮುಖ ಶಿವಯೋಗಿಯವರೆಗೂ ಸಾಗಿಬಂದಿದೆ.

ವಚನಕಾರರು ಧರ್ಮದ ಗಂಭೀರ ತಾತ್ವಿಕ ಚಿಂತನೆಗಿಂತ ಅಂದರೆ ಜ್ಞಾನಮಾರ್ಗಕ್ಕಿಂತ ಆಚರಣೆಯ ಮೂಲಕ ಮುಕ್ತಿ ಸಾಧನೆಯ ಭಕ್ತಿ ಮಾರ್ಗವನ್ನು ಅವಲಂಬಿಸಿದವರು. ಪ್ರಭುದೇವ, ಚೆನ್ನಬಸವಣ್ಣನಂತಹ ಕೆಲವರ ವಚನಗಳಲ್ಲಿ ತಾತ್ವಿಕ ಚಿಂತನೆ ಹರಳುಗಟ್ಟಿದೆ. ಬೆಡಗಿನ ವಚನಗಳಲ್ಲಿ ಅದು ಇನ್ನೂ ಗಾಢವಾಗಿ ತುಂಬಿಕೊಂಡಿದೆ. ಐಕ್ಯಸ್ಥಲದ ತುತ್ತುತುದಿಯಲ್ಲಿದ್ದ ಪ್ರಭುದೇವ ಮುಂತಾದ ಕೆಲವರಲ್ಲಿ ಮಾತ್ರ ವೀರಶೈವ ಧರ್ಮದ ತಾತ್ವಿಕ ವಿವೇಚನೆ ಗಹನವಾಗಿದೆ. ಸಾಮಾನ್ಯ ವಚನಕಾರರು ಶರಣಸ್ಥಲದಲ್ಲಿ ನಿಂತು ತತ್ತ್ವಗಳನ್ನು ಆಚರಿಸಿ ತೋರುವಲ್ಲಿ ನಿಸ್ಸೀಮರೆನಿಸಿದ್ದರು. ದಲಿತೋದ್ಧಾರ, ಜಾತಿ ನಿರ್ಮೂಲನ, ವೈದಿಕ ಆಚರಣೆಗಳ ಖಂಡನೆ, ಜಂಗಮಪಾರಮ್ಯ, ದಾಸೋಹ, ಕಾಯಕಗಳ ಪ್ರಾಧಾನ್ಯ, ಅಹಂ ನಿರಸನ ಮತ್ತು ಕಿಂಕರತ್ವ ಪ್ರತಿಪಾದನೆ, ಗುರುಹಿರಿಯರಲ್ಲಿ ಭಕ್ತಿ, ನಡೆ ನುಡಿಯಲ್ಲಿ ಏಕತೆ, ಸ್ತ್ರೀ ಸಮಾನತೆ, ಪರಸ್ತ್ರೀಯರಲ್ಲಿ ಗೌರವ, ಧಾರ್ಮಿಕ ಆಚರಣೆಗಳಲ್ಲಿ ಸರಳತೆ, ಹಲವು ದೈವಪೂಜಾ ಖಂಡನೆ, ದೇವಾಲಯ ತಿರಸ್ಕಾರ, ಇಹದ ಸುಖಗಳನ್ನು ಅನುಭವಿಸುವಲ್ಲಿ ಸ್ವೇಚ್ಛಾಚಾರ ಇಲ್ಲದ ತಂತ್ರ್ಯ, ಅನುಭಾವಸಿದ್ಧ ಆಚರಣೆ ಇವೇ ಮೊದಲಾದ ವಿಷಯಗಳನ್ನು ಶರಣರ ವಚನಗಳಲ್ಲಿ ನಾವು ಕಾಣುತ್ತೇವೆ. ಅಂತೆಯೇ ಕಾವ್ಯ ಶಾಸ್ತ್ರ ಪುರಾಣ, ವೇದಾಗಮಗಳೂ ಮಾಡದ ಪರಿಣಾಮವನ್ನು ವಚನಗಳು ಮಾಡುತ್ತವೆ. ಈ ದೃಷ್ಟಿಯಿಂದ ವಚನಗಳು ಮನುಷ್ಯನ ಸಾರ್ಥಕ ಬದುಕಿಗೆ ಹಿಡಿದ ದಿವ್ಯಜ್ಯೋತಿಗಳಾಗಿವೆ. ಯಾವ ಕಾಲಕ್ಕೂ ಅವು ಪ್ರಸ್ತುತವೆನಿಸುವಂತಿವೆ.

**ಸಮಾರೋಪ**

ವಚನಕಾರರು ಮರ್ತ್ಯಲೋಕದಲ್ಲಿದ್ದು ಈ ಲೋಕದಲ್ಲಿ ಬದುಕಿನ ಎಲ್ಲ ಕೋಟಲೆ ದಂದುಗಗಳನ್ನು ಅನುಭವಿಸಿದವರು, ಸಂಸಾರ ವಿಮುಖವಾಗಿ ಕಾಡಿಗೆ ಹೋಗಿ ತಪಸ್ಸಿಗೆ ಕುಳಿತವರಲ್ಲ. ಆದ್ದರಿಂದ ತಾವು 'ಅನುಭವ' ಮಾರ್ಗದ ಸಾಧಕರಾಗಿದ್ದುದರಿಂದ ಈ ಲೋಕದಲ್ಲಿ ಬದುಕುತ್ತಿದ್ದುದರಿಂದ ಲೋಕದ ವ್ಯವಹಾರದಲ್ಲಿ ನಡೆಯುವ ಲೋಕದ ಅನುಭವಗಳೆಲ್ಲವನ್ನೂ ತಮ್ಮ ಸಹ ಸಾಧಕರೊಡನೆ ಚರ್ಚೆ ಮಂಥನ ಮಾಡುವುದರಿಂದ ತಿಳಿದುಕೊಳ್ಳಬೇಕಾಗಿತ್ತು. ಮುಂದೆ ತಮಗೇನಾದರೂ ಅಂತಹ ಸಂಂದರ್ಭವೊದಗಿದರೆ ಉದ್ಭವವಾಗಬಹುದಾದ ತೊಡಕುಗಳನ್ನು ನಿವಾರಿಸಿಕೊಳ್ಳಲು ಲೋಕಾನುಭವದ ಅವರ ನುಡಿಗಳು ಮಾರ್ಗದರ್ಶಿಯಾಗುತ್ತಿದ್ದವು.

**ಪರಾಮರ್ಶನ ಗ್ರಂಥಗಳು**


- ಬಸವರಾಜು, ಎಲ್. (ಸಂ.). (2018). *ಬಸವೇಶ್ವರರ ವಚನ ಸಂಗ್ರಹ.* (ಹದಿನೈದನೇ ಮುದ್ರಣ) ಸಪ್ನ ಬುಕ್ ಹೌಸ್.
- ಹಿರೇಮಠ, ಆರ್.ಸಿ. (ಸಂ.). (1968). ಭಕ್ತಿ ಭಂಡಾರ ಬಸವಣ್ಣನವರ ವಚನಗಳು: ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
- ಹಿರೇಮಠ, ಆರ್.ಸಿ, ಮತ್ತು ಸುಂಕಾಪುರ ಎಂ.ಎಸ್. (ಸಂ.) (1976). *ಅಲ್ಲಮಪ್ರಭುದೇವರ ವಚನಗಳು.* ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ.
- ಕಲ್ಬುರ್ಗಿ, ಎಂ.ಎಂ. (ಸಂ.). (1976). *ಬಸವಣ್ಣನವರ ಟೀಕಿನ ವಚನಗಳು.* ಶ್ರೀ ಮುರಗೋಡ ಮಹಾಂತ ಶಿವಯೋಗೀಶ್ವರ ಶತಮಾನೋತ್ಸವ ಸ್ಮಾರಕ ಶ್ರೀ ಬಸವೇಶ್ವರ ಪೀಠ ಹಾಗೂ ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ.
- ನಂಜುಂಡಸ್ವಾಮಿ, ಜಿ. (2009). *ವಚನಪಿತಾಮಹ ಡಾ. ಫ.ಗು. ಹಳಕಟ್ಟಿ : ಸಮಗ್ರ ಸಾಹಿತ್ಯ ಸಮೀಕ್ಷೆ.* ಪ್ರಭುದೇವರ ಜನಕಲ್ಯಾಣ ಸಂಸ್ಥೆ.